Akashvani : Bangalore
National Bulletin In Kannada
12.04.2025 : 7.35AM
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

12.04.2025 : 7.35AM
******

ಮುಖ್ಯಾಂಶಗಳು

1. ವ್ಯಾಪಾರ ಒಪ್ಪಂದದ ಗಡುವುಗಳನ್ನು ಸಾಧಿಸಲು ರಾಷ್ಟ್ರೀಯ ಹಿತಾಸಕ್ತಿಯಲ್ಲಿ ರಾಜಿ ಮಾಡಿಕೊಳ್ಳಲು ಸಾಧ್ಯವಿಲ್ಲ - ಕೇಂದ್ರ ಸಚಿವ ಪಿಯೂಷ್ ಗೋಯಲ್
2. ತಹಾವೂರ್ ರಾಣಾ ಹಸ್ತಾಂತರ, ಮುಂಬೈ ದಾಳಿಯ ಸಂತ್ರಸ್ತರಿಗೆ ನ್ಯಾಯ ಒದಗಿಸುವ ಪಥದಲ್ಲಿ ದೊಡ್ಡ ಹೆಜ್ಜೆಯಾಗಿದೆ - ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್
3. ೮ನೇ ಭಾರತ - ಆಸಿಯಾನ್ ಸರಕು ವ್ಯಾಪಾರ ಒಪ್ಪಂದ ಕುರಿತ ಜಂಟಿ ಸಮಿತಿ ಸಭೆ ಸಂಪನ್ನ
4. ವೇವ್ಸ್ ಶೃಂಗಸಭೆ: ವಿಷಯಾಧಾರಿತ ಸಂಗೀತ ಸ್ಪರ್ಧೆಯ ವಿಜೇತರನ್ನು ಘೋಷಿಸಿದ ಮಾಹಿತಿ ಮತ್ತು ಪ್ರಸಾರ ಸಚಿವಾಲಯ
5. ಐಪಿಎಲ್ ಟಿ-೨೦ ಕ್ರಿಕೆಟ್: ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಕೋಲ್ಕತಾ ನೈಟ್ ರೈಡರ್ಸ್‌ಗೆ ೮ ವಿಕೆಟ್ ಜಯ

*****

ವ್ಯಾಪಾರ ಒಪ್ಪಂದದ ಗಡುವುಗಳನ್ನು ಸಾಧಿಸಲು ರಾಷ್ಟ್ರೀಯ ಹಿತಾಸಕ್ತಿಯಲ್ಲಿ ರಾಜಿ ಮಾಡಿಕೊಳ್ಳಲು ಸಾಧ್ಯವಿಲ್ಲ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಹೇಳಿದ್ದಾರೆ. ನವದೆಹಲಿಯಲ್ಲಿ ನಿನ್ನೆ ನಡೆದ ೯ನೇ ಜಾಗತಿಕ ತಂತ್ರಜ್ಞಾನ ಶೃಂಗಸಭೆಯಲ್ಲಿ ಮಾತನಾಡಿದ ಅವರು, ವ್ಯಾಪಾರ ಒಪ್ಪಂದಗಳು ಉಭಯ ಕಡೆಯವರಿಗೆ ಲಾಭದಾಯಕವಾಗಿರಬೇಕು. ಅಮೆರಿಕದಂತಹ ವಿಶ್ವಾಸಾರ್ಹ ಪಾಲುದಾರರೊಂದಿಗೆ ಜಾಗತಿಕ

ವ್ಯಾಪಾರವನ್ನು ಮರು ರೂಪಿಸುವಲ್ಲಿ ಭಾರತಕ್ಕಿರುವ ಅವಕಾಶದ ಕುರಿತು ಅವರು ಒತ್ತಿ ಹೇಳಿದರು. ವಾಣಿಜ್ಯ ಒಪ್ಪಂದಗಳಲ್ಲಿ ಗಡುವುಗಳು ಪ್ರಮುಖವಾಗಿದ್ದರೂ ಅವುಗಳನ್ನು ಪೂರೈಸಲು ರಾಷ್ಟ್ರೀಯ ಹಿತಾಸಕ್ತಿಯನ್ನು ಕಡೆಗಣಿಸಲು ಸಾಧ್ಯವಿಲ್ಲ. ಈ ಒಪ್ಪಂದಗಳು ಸಮಾನ, ನ್ಯಾಯಸಮ್ಮತ ಮತ್ತು ಪರಸ್ಪರ ಪ್ರಯೋಜನಕಾರಿಯಾಗಿರಬೇಕು ಎಂದು ಹೇಳಿದರು.

***ಧ್ವನಿ*** ಪಿಯೂಷ್ ಗೋಯಲ್

ಪ್ರಸ್ತುತ ಭಾರತ ಐರೋಪ್ಯ ಒಕ್ಕೂಟ, ಬ್ರಿಟನ್ ಮತ್ತು ಅಮೆರಿಕ ಸೇರಿದಂತೆ ಅನೇಕ ರಾಷ್ಟ್ರಗಳೊ ಡನೆ ವ್ಯಾಪಾರ ಒಪ್ಪಂದ ಮಾಡಿಕೊಳ್ಳುವ ದಿಸೆಯಲ್ಲಿ ಕೆಲಸ ಮಾಡುತ್ತಿದೆ.

*****

ಉದಯೋನ್ಮುಖ ವ್ಯಾಪಾರ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಪಾಲುದಾರರಿಗೆ ನೆರವಾಗಲು ಕೇಂದ್ರ ಸರ್ಕಾರ, ಜಾಗತಿಕ ಸುಂಕ ಮತ್ತು ವ್ಯಾಪಾರ ಸಹಾಯವಾಣಿಯನ್ನು ಕಾರ್ಯಗತಗೊಳಿಸಿದೆ. ಈ ಕುರಿತು ಹೇಳಿಕೆ ಬಿಡುಗಡೆಗೊಳಿಸಿರುವ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ, ಆಮದು ಮತ್ತು ರಫ್ತು ಸವಾಲುಗಳು, ಸರಕು ಅಥವಾ ಸರಬರಾಜು ಸರಪಳಿ ಸವಾಲುಗಳು, ಹಣಕಾಸು ಮತ್ತು ಬ್ಯಾಂಕಿಂಗ್ ಸಮಸ್ಯೆಗಳು ಸೇರಿದಂತೆ ಸಂಬಂಧಿತ ಇತರ ಸಮಸ್ಯೆಗಳನ್ನು ಸಹಾಯವಾಣಿ ಮೂಲಕ ಪರಿಹರಿಸಿಕೊಳ್ಳಬಹುದಾಗಿದೆ. ಇದರ ಜೊತೆಗೆ ಈ ಸಹಾಯವಾಣಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಇತರ ಸಚಿವಾಲಯಗಳು, ಇಲಾಖೆಗಳು ಹಾಗೂ ಸಂಸ್ಥೆಗಳಿಗೆ ಸಂಬಂಧಿಸಿದ ವ್ಯಾಪಾರ ಸಂಬಂಧ ಸಮಸ್ಯೆಗಳಿಗೂ ಪರಿಹಾರ ಒದಗಿಸುವ ಗುರಿ ಹೊಂದಿದೆ. ಆಸಕ್ತರು ತಮ್ಮ ಸಮಸ್ಯೆಗಳ ಕುರಿತಂತೆ **dgftedi@nic.in** ಇಮೇಲ್ ಮೂಲಕ ಅಥವಾ ಟ್ರೋಲ್‌ಫ್ರೀ ಸಂಖ್ಯೆ **1800-111-550** ಗೆ ಕರೆ ಮಾಡಿ ಮಾಹಿತಿ ನೀಡಬಹುದಾಗಿದೆ.

*****

ರಾಷ್ಟ್ರಪತಿ ದ್ರೌಪದಿ ಮುರ್ಮು ಪೋರ್ಚುಗಲ್ ಹಾಗೂ ಸ್ಲೋವಾಕಿಯಾ ದೇಶಗಳ ತಮ್ಮ ಐತಿಹಾಸಿಕ ಭೇಟಿಯನ್ನು ಸಂಪನ್ನಗೊಳಿಸಿದ್ದು, ನಿನ್ನೆ ರಾತ್ರಿ ನವದೆಹಲಿಗೆ ಮರಳಿದ್ದಾರೆ. ತಮ್ಮ ಭೇಟಿಯ ಭಾಗವಾಗಿ ರಾಷ್ಟ್ರಪತಿ, ಉಭಯ ರಾಷ್ಟ್ರಗಳೊಂದಿಗೆ ದ್ವಿಪಕ್ಷೀಯ ಸಂಬಂಧಗಳನ್ನು ಬಲಪಡಿಸುವ

ಗುರಿ ಹೊಂದಿದ್ದ ಉನ್ನತ ಮಟ್ಟದ ಸಭೆಗಳನ್ನು ನಡೆಸಿದರು. ಸ್ಲೋವಾಕಿಯಾ ಅಧ್ಯಕ್ಷ ಪೀಟರ್ ಪೆಲ್ಲೆಗ್ರೀನಿ ಅವರ ಆಹ್ವಾನದ ಮೇರೆಗೆ ರಾಷ್ಟ್ರಪತಿಗಳು ಸ್ಲೋವಾಕಿಯಾಗೆ ಭೇಟಿ ನೀಡಿದರು. ಭಾರತೀಯ ರಾಷ್ಟ್ರಪತಿ ಒಬ್ಬರು ಸ್ಲೋವಾಕಿಯಾಗೆ ೨೯ ವರ್ಷಗಳ ನಂತರ ನೀಡಿದ ಭೇಟಿ ಇದಾಗಿದೆ. ಈ ವೇಳೆ ನಡೆದ ಸಭೆಗಳಲ್ಲಿ ರಾಷ್ಟ್ರಪತಿಗಳು, ಸ್ಲೋವಾಕಿಯಾದಲ್ಲಿ ಭಾರತದ ಪರಂಪರೆ ಮತ್ತು ಪ್ರಾಚೀನ ಅಭ್ಯಾಸಗಳನ್ನು ಯೋಗ, ಆಯುರ್ವೇದ ಸೇರಿದಂತೆ ಭಾರತೀಯ ಪಾಕ ಪದ್ಧತಿಯ ಜನಪ್ರಿಯತೆ ಕುರಿತು ಒತ್ತಿ ಹೇಳಿದರು. ಪೋರ್ಚುಗಲ್‌ನಲ್ಲೂ ರಾಷ್ಟ್ರಪತಿಗಳು ಅಲ್ಲಿನ ಉನ್ನತ ಮಟ್ಟದ ನಾಯಕರೊಂದಿಗೆ ಮಹತ್ವದ ಸಭೆಗಳನ್ನು ನಡೆಸಿದರು. ಭಾರತ ಹಾಗೂ ಐರೋಪ್ಯ ಒಕ್ಕೂಟ, ಮುಕ್ತ ವ್ಯಾಪಾರ ಒಪ್ಪಂದ ಕುರಿತು ಮಾತುಕತೆಯಲ್ಲಿ ತೊಡಗಿರುವ ಸಮಯದಲ್ಲಿ ರಾಷ್ಟ್ರಪತಿಗಳ ಈ ಭೇಟಿ ಮಹತ್ವ ಪಡೆದಿತ್ತು.

*****

ಎಐಎಡಿಎಂಕೆ ಪಕ್ಷ ಎನ್‌ಡಿಎ ಮೈತ್ರಿಕೂಟ ಸೇರುವ ನಿರ್ಧಾರದ ಕುರಿತಂತೆ ಪ್ರಧಾನಿ ನರೇಂದ್ರ ಮೋದಿ ಸಂತಸ ವ್ಯಕ್ತಪಡಿಸಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಅವರು, ಇತರ ಎನ್‌ಡಿಎ ಪಾಲುದಾರರೊಂದಿಗೆ ತಮಿಳುನಾಡನ್ನು ಪ್ರಗತಿಯ ಹೊಸ ಎತ್ತರಕ್ಕೆ ಕೊಂಡೊಯ್ಯಲಾಗುವುದು ಮತ್ತು ಶ್ರದ್ಧೆಯಿಂದ ಸೇವೆ ಸಲ್ಲಿಸಲಾಗುವುದು ಎಂದಿದ್ದಾರೆ. ಎನ್‌ಡಿಎ ಮೈತ್ರಿಕೂಟ ಮಾಜಿ ಮುಖ್ಯಮಂತ್ರಿಗಳಾದ ಎಂ.ಜಿ. ರಾಮಚಂದ್ರನ್ ಮತ್ತು ಜಯಲಲಿತಾ ಅವರ ದೃಷ್ಟಿಕೋನಗಳನ್ನು ಸಾಕಾರಗೊಳಿಸುವ ಸರ್ಕಾರವನ್ನು ಖಚಿತಪಡಿಸಲು ಶ್ರಮಿಸುವುದಾಗಿ ತಿಳಿಸಿದರು.

*****

ಭಾರತ - ಅಮೆರಿಕ ನಡುವಿನ ಭಯೋತ್ಪಾದನಾ ನಿಗ್ರಹ ಸಹಕಾರದ ಕುರಿತಂತೆ ವಿದೇಶಾಂಗ ಸಚಿವ ಎಸ್. ಜೈಶಂಕರ್ ಶ್ಲಾಘನೆ ವ್ಯಕ್ತಪಡಿಸಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಅವರು, ೨೦೦೮ರ ಮುಂಬೈ ಭಯೋತ್ಪಾದನಾ ದಾಳಿಯ ಪ್ರಮುಖ ಆರೋಪಿ ತಹಾವೂರ್ ಹುಸೇನ್ ರಾಣಾನ ಹಸ್ತಾಂತರ, ದಾಳಿಯ ಸಂತ್ರಸ್ತರಿಗೆ ನ್ಯಾಯ ಒದಗಿಸುವ ಪಥದಲ್ಲಿ ದೊಡ್ಡ ಹೆಜ್ಜೆಯಾಗಿದೆ ಎಂದಿದ್ದಾರೆ. ತಮ್ಮ ಸಂದೇಶದಲ್ಲಿ ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ, ಮುಂಬೈ ದಾಳಿಯಲ್ಲಿ ಪ್ರಾಣಕಳೆದುಕೊಂಡ ಆರು ಅಮೆರಿಕನ್ನರು ಸೇರಿದಂತೆ ೧೬೬ ಜನರಿಗೆ

ನ್ಯಾಯ ಒದಗಿಸಲು ಭಾರತ ಹಾಗೂ ಅಮೆರಿಕ ಶ್ರಮಿಸುತ್ತಿದೆ ಹಾಗೂ ನ್ಯಾಯ ಒದಗಿಸುವ ಸಮಯ ಬಂದಿದೆ ಎಂದು ಹೇಳಿದ್ದಾರೆ.

*****

ಭಾರತ ಆತಿಥ್ಯದಲ್ಲಿ ನಡೆದ ೮ನೇ ಭಾರತ - ಆಸಿಯಾನ್ ಸರಕು ವ್ಯಾಪಾರ ಒಪ್ಪಂದ ಎಐಟಿಐಜಿಎ ಕುರಿತ ಜಂಟಿ ಸಮಿತಿ ಸಭೆ ನಿನ್ನೆ ಮುಕ್ತಾಯಗೊಂಡಿದೆ. ನವದೆಹಲಿಯಲ್ಲಿ ನಿನ್ನೆ ನಡೆದ ಈ ಐದು ದಿನಗಳ ಸಭೆಗೆ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ರಾಜೇಶ್ ಅಗರ್‌ವಾಲ್ ಮತ್ತು ಮಲೇಷ್ಯಾ ಹೂಡಿಕೆ ವ್ಯಾಪಾರ ಮತ್ತು ಕೈಗಾರಿಕಾ ಸಚಿವಾಲಯದ ಹಿರಿಯ ನಿರ್ದೇಶಕಿ ಡಾ. ಸುಗುಮಾರಿ ಎಸ್. ಷಣ್ಮುಗಂ ಸಹ ಅಧ್ಯಕ್ಷತೆ ವಹಿಸಿದ್ದರು. ಹೇಳಿಕೆಯೊಂದರಲ್ಲಿ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ, ಒಪ್ಪಂದಗಳನ್ನು ಹೆಚ್ಚು ಪರಿಣಾಮಕಾರಿ, ಬಳಕೆದಾರ ಸ್ನೇಹಿ ಮತ್ತು ವ್ಯಾಪಾರಕ್ಕೆ ಅನುಕೂಲಕರವಾಗಿಸಲು ಅದನ್ನು ಆಧುನೀಕರಿಸುವ ಗುರಿ ಹೊಂದಿರುವ ಎಐಟಿಐಜಿಎಯನ್ನು ವಿಮರ್ಶಿಸಿ, ಮುನ್ನಡೆಸಲು ಸಮಿತಿಯ ಪ್ರಾಥಮಿಕ ಉದ್ದೇಶವಾಗಿದೆ ಎಂದು ತಿಳಿಸಿದೆ. ೨೦೨೩-೨೪ ಹಣಕಾಸು ವರ್ಷದಲ್ಲಿ ಭಾರತ ಹಾಗೂ ಆಸಿಯಾನ್ ನಡುವಿನ ದ್ವಿಪಕ್ಷೀಯ ವ್ಯಾಪಾರ ೧೨೧ ಶತಕೋಟಿ ಡಾಲರ್‌ಗೆ ತಲುಪಿದೆ. ಸಭೆಯಲ್ಲಿ ಬ್ರೂನೈ, ಕಾಂಬೋಡಿಯಾ, ಇಂಡೋನೇಷಿಯಾ, ಲಾವೋಪಿಡಿಆರ್, ಮಲೇಷ್ಯಾ, ಮ್ಯಾನ್ಮಾರ್, ಫಿಲಿಪ್ಪೈನ್ಸ್, ಸಿಂಗಾಪುರ, ಥೈಲ್ಯಾಂಡ್ ಮತ್ತು ವಿಯೆಟ್ನಾಂ ಸೇರಿದಂತೆ ಆಸಿಯಾನ್ ರಾಷ್ಟ್ರಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

*****

ಕೇಂದ್ರ ಸಚಿವ ಸಂಪುಟವು ಇತ್ತೀಚೆಗೆ ಗೊಂಡಿಯಾ-ಬಲ್ಲರ್ಶಾ ರೈಲು ಮಾರ್ಗವನ್ನು ಅನುಮೋದಿಸಿದೆ ಎಂದು ಕೇಂದ್ರ ರೈಲ್ವೆ, ಮಾಹಿತಿ ಮತ್ತು ಪ್ರಸಾರ ಹಾಗೂ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ. "ಉತ್ತಮ ಮೂಲಸೌಕರ್ಯ, ಉತ್ತಮ ತಂತ್ರಜ್ಞಾನ, ಉತ್ತಮ ರೈಲುಗಳು" ಎಂಬ ವಿಷಯದ ಕುರಿತು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರೊಂದಿಗೆ ಮುಂಬೈನಲ್ಲಿ ನಿನ್ನೆ ಜಂಟಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು. ಈ ರೈಲು ಮಾರ್ಗ ೪ ಸಾವಿರದ ೮೧೯ ಕೋಟಿ ರೂಪಾಯಿಗಳ

ವೆಚ್ಚದೊಂದಿಗೆ ೨೪೦ ಕಿಲೋಮೀಟರ್ ಉದ್ದದ ಕಾರ್ಯತಂತ್ರದ ಕಾರಿಡಾರ್ ಆಗಿದೆ. ಇದು ಪ್ರಾದೇಶಿಕ ಆರ್ಥಿಕತೆ ಮತ್ತು ಪ್ರವಾಸೋದ್ಯಮವನ್ನು ಉತ್ತೇಜಿಸುತ್ತದೆ ಎಂದು ಅವರು ಹೇಳಿದರು. ಈ ಸಂದರ್ಭದಲ್ಲಿ ವೈಷ್ಣವ್ ಅವರು ಎನ್‌ಡಿಎ ಸರ್ಕಾರದ ಮೂರನೇ ಅವಧಿಯಲ್ಲಿ ಮಹಾರಾಷ್ಟ್ರಕ್ಕೆ ಸಂಬಂಧಿಸಿದ ವಿವಿಧ ಯೋಜನೆಗಳಿಗೆ ೧ ಲಕ್ಷ ೭೦ ಸಾವಿರ ಕೋಟಿಗೂ ಹೆಚ್ಚು ಹಣವನ್ನು ಮಂಜೂರು ಮಾಡಲಾಗಿದೆ ಎಂದು ಮಾಹಿತಿ ನೀಡಿದರು. ೩೦೦ ಕಿಲೋಮೀಟರ್‌ಗಳಿಗೂ ಹೆಚ್ಚು ಹೊಸ ಮಾರ್ಗಗಳನ್ನು ಒಳಗೊಂಡ ಸುಮಾರು ೧೭ ಸಾವಿರ  ಕೋಟಿ ರೂಪಾಯಿಗಳ ಯೋಜನೆಗಳು ಪ್ರಸ್ತುತ ತ್ವರಿತಗತಿಯಲ್ಲಿ ನಡೆಯುತ್ತಿವೆ ಎಂದ ಅವರು, ಉಪನಗರ ವಿಭಾಗಕ್ಕೆ ಅನುಗುಣವಾಗಿ ಅತ್ಯಾಧುನಿಕ ಸುರಕ್ಷತೆ ಮತ್ತು ಸಿಗ್ನಲಿಂಗ್ ವ್ಯವಸ್ಥೆಯಾದ ಕವಚ್ ೫.೦ ಅನ್ನು ಶೀಘ್ರದಲ್ಲೇ ಪ್ರಾರಂಭಿಸುವುದಾಗಿ ಅವರು ಘೋಷಿಸಿದರು.

***ಧ್ವನಿ ***ಅಶ್ವಿನಿ ವೈಷ್ಣವ್

*****

ವೇವ್ಸ್ ಶೃಂಗಸಭೆ ೨೦೨೫ರ ಭಾಗವಾಗಿ ನಡೆಯುತ್ತಿರುವ ೩೨ ಸ್ಪರ್ಧೆಗಳಲ್ಲಿ ಒಂದಾದ ವಿಷಯಾಧಾರಿತ ಸಂಗೀತ ಸ್ಪರ್ಧೆಯ ವಿಜೇತರನ್ನು ಮಾಹಿತಿ ಮತ್ತು ಪ್ರಸಾರ ಸಚಿವಾಲಯ ಘೋಷಿಸಿದೆ.  ಮೊದಲ ವಿಶ್ವ ಆಡಿಯೋ ಮತ್ತು ವಿಡಿಯೋ ಮನರಂಜನಾ ಶೃಂಗಸಭೆ ವೇವ್ಸ್ ೨೦೨೫ ಈ ವರ್ಷ ಮೇ ೧ ರಿಂದ ೪ ರವರೆಗೆ ಮುಂಬೈನಲ್ಲಿ ನಡೆಯಲಿದೆ.  ದೇಶಾದ್ಯಂತ ಬಂದಿದ್ದ ನೂರಾರು ಸ್ಪರ್ಧಾಳುಗಳ ಪೈಕಿ ಆರು ವಿಜೇತರನ್ನು ಆಯ್ಕೆ ಮಾಡಲಾಯಿತು. ಸ್ಪರ್ಧಾಳುಗಳ ಸೃಜನಶೀಲತೆ, ಸ್ವಂತಿಕೆ, ಸಂಗೀತ ಮತ್ತು ವೇವ್ಸ್ ವಿಷಯದೊಂದಿಗೆ ಹೊಂದಾಣಿಕೆಯ ಕಠಿಣ ಮೌಲ್ಯಮಾಪನದ ನಂತರ ತೀರ್ಪುಗಾರರ ತಂಡ ವಿಜೇತರನ್ನು ಆಯ್ಕೆ ಮಾಡಿತು. ಸ್ಪರ್ಧೆಯು ಭಾರತದ ವೈವಿಧ್ಯಮಯ ಸಂಗೀತ ಪ್ರತಿಭೆಯನ್ನು ಪ್ರದರ್ಶಿಸುವ ಗುರಿಯನ್ನು ಹೊಂದಿದೆ ಎಂದು ಸಚಿವಾಲಯ ತಿಳಿಸಿದೆ.

*****

ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ನಿನ್ನೆ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಕೋಲ್ಕತ್ತಾ ನೈಟ್ ರೈಡರ್ಸ್ ತಂಡ ೮ ವಿಕೆಟ್‌ಗಳ ಜಯ ಸಾಧಿಸಿದೆ. ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಚೆನ್ನೈ, ನಿಗದಿತ ೨೦ ಓವರ್‌ಗಳಲ್ಲಿ ೯ ವಿಕೆಟ್ ನಷ್ಟಕ್ಕೆ ೧೦೭ ರನ್ ಗಳಿಸಲಷ್ಟೇ ಶಕ್ತವಾಯಿತು. ಇದಕುತ್ತರವಾಗಿ ಕೋಲ್ಕತ್ತಾ ತಂಡ, ಕೇವಲ ೧೦.೧ ಓವರ್‌ಗಳಲ್ಲಿ ೨ ವಿಕೆಟ್ ನಷ್ಟಕ್ಕೆ ೧೦೭ ರನ್‌ಗಳಿಸಿ, ಗೆಲುವು ತನ್ನದಾಗಿಸಿಕೊಂಡಿತು. ಬೌಲಿಂಗ್ ಹಾಗೂ ಬ್ಯಾಟಿಂಗ್ ಎರಡರಲ್ಲೂ ಉತ್ತಮ ಪ್ರದರ್ಶನ ತೋರಿದ ಕೋಲ್ಕತಾ ತಂಡದ ಸುನೀಲ್ ನರೇನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ಇಂದು ಎರಡು ಪಂದ್ಯಗಳು ನಡೆಯುತ್ತಿದ್ದು, ಮೊದಲ ಪಂದ್ಯದಲ್ಲಿ ಲಕ್ನೋ ಸೂಪರ್ ಜೈಂಟ್ಸ್ ಮತ್ತು ಗುಜರಾತ್ ಟೈಟನ್ಸ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ಮಧ್ಯಾಹ್ನ ೩.೩೦ಕ್ಕೆ ಆರಂಭವಾಗಲಿದೆ. ದಿನದ ಎರಡನೇ ಪಂದ್ಯದಲ್ಲಿ ಸನ್ ರೈಸರ್ಸ್ ಹೈದರಾಬಾದ್ ಹಾಗೂ ಪಂಜಾಬ್ ಕಿಂಗ್ಸ್ ತಂಡಗಳು ಸೆಣಸಾಟ ನಡೆಸಲಿದ್ದು, ಈ ಪಂದ್ಯ ರಾತ್ರಿ ೭.೩೦ಕ್ಕೆ ಆರಂಭವಾಗಲಿದೆ.

******